ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಶಿಕ್ಷಣ ಇಲಾಖೆಯ ಬಗ್ಗೆ ಬಹಳಷ್ಟು ಜನ ಮಾನ್ಯ ಸದಸ್ಯರು ತಮ್ಮ ಕಾಳಜಿಯನ್ನು ತೋರಿಸಿದ್ದನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಸರ್ಕಾರಕ್ಕೆ ಈ ಶಿಕ್ಷಣ ವ್ಯವಸ್ಥೆ ಒಂದು ಜನಾಂದೋಲನದ ಆ ರೀತಿಯಲ್ಲಿ ಆಗಬೇಕೆಂಬ ಬಯಕೆ ಇದೆ. ಬರೇ ಸರ್ಕಾರ ಮಾತ್ರ ಇದರಲ್ಲಿ ಪಾಲ್ಗೊಂಡರೆ ಸಾಲದು, ಸಮುದಾಯ ಮತ್ತು ಜನ ಪ್ರತಿನಿಧಿಗಳೆಲ್ಲರೂ ಕೂಡ ಇದರಲ್ಲಿ ಸಹಯೋಗವನ್ನು ವ್ಯಕ್ತಪಡಿಸಿ ಪಾಲ್ಗೊಂಡರೆ ಮಾತ್ರ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲಿಕ್ಕೆ ಸಾಧ್ಯವಿದೆ. ಸರ್ಕಾರ ಆ ರೀತಿಯಾಗಿ ಸಮುದಾಯ ಹಾಗೂ ಹಲವಾರು ಸಂಘ ಸಂಸ್ಥೆಗಳನ್ನು ವಿನಂತಿ ಮಾಡಿದ್ದು ನಿಜ. ನಾನು ಈ ಸಂದರ್ಭದಲ್ಲಿ ನಮ್ಮ ಶಾಸಕ ಮಿತ್ರರುಗಳನ್ನು ಕೇಳಿಕೊಳ್ಳುವುದೇನೆಂದರೆ, ನಾವು ಜಿಲ್ಲಾ ಪಂಚಾಯಿತಿಯಲ್ಲಿ ಆಗಲೀ, ಪಿ.ಡಬ್ಲ್ಯೂ.ಡಿ.ಯಲ್ಲಿ ಆಗಲೀ ಮತ್ತು ಬೇರೆ ಬೇರೆ ಇಲಾಖೆಯಲ್ಲಿ ನಾವು ಆ್ಯಕ್ಷನ್ ಪ್ಲಾನ್ ಮಾಡುವಂತಹ ಸಂದರ್ಭದಲ್ಲಿ ನಮ್ಮ ಶಿಕ್ಷಣ ಇಲಾಖೆಯನ್ನು ಮಾತ್ರ ಸೀಮಿತವಾಗುತ್ತದೆಯೇ ಹೊರತು ಯಾವ ಇಲಾಖೆಯೂ ಈ ಶಿಕ್ಷಣ ಇಲಾಖೆಯನ್ನು ಮಾತೃ ಇಲಾಖೆಯಾಗಿ ಅಥವಾ ಬುನಾದಿಯನ್ನಾಗಿ ಪರಿಗಣಿಸಿಲ್ಲ. ಆ ರೀತಿಯಲ್ಲಿ ನಿಮ್ಮ ನೆನಪು, ಆದ್ಯತೆಯನ್ನು ಈ ಶಿಕ್ಷಣ ಇಲಾಖೆಗೆ ನೀವು ಕೊಟ್ಟಾಗ ಮಾತ್ರ ಇದನ್ನು ಸರ್ವಾಂಗೀಣವನ್ನಾಗಿ, ಸಮಗ್ರವಾಗಿ ಇದಕ್ಕೊಂದು ಬದಲಾವಣೆಯನ್ನು ಅಥವಾ ಪರಿವರ್ತನೆಯನ್ನು ತರಬಹುದು ಎಂಬ ವಿನಂತಿಯನ್ನೂ ಕೂಡ ನಾನು ತಮ್ಮಲ್ಲಿ ಮಾಡಿಕೊಂಡು, ತಾವೇನು ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ, ಆ ದಿಕ್ಕಿನಲ್ಲಿ ಈ ಕಾರ್ಯವನ್ನು ತಮ್ಮೆಲ್ಲರ ಸಹಯೋಗದಿಂದಲೇ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಚೆನ್ನಗಿರಿ ವಿಧಾನಸಭಾಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ

188 (1791) ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು?

ಇ) ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಕಡೆ ವೈದ್ಯರು ಇದ್ದಾರೆಯೇ?

ಈ) ಚನ್ನಗಿರಿ ಸಾರ್ವಜನಿಕ ಆಸ್ಪತ್ರೆಗೆ ಮಹಿಳಾ ವೈದ್ಯರನ್ನು ಪ್ರಸಕ್ತ ವರ್ಷದಲ್ಲಿ ನೇಮಿಸಲಾಗುವುದೇ ?

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಆ) 8 ಪ್ರಾಥಮಿಕ ಆರೋಗ್ಯ ಘಟಕಗಳು

ಇ) 3 ಹುದ್ದೆಗಳು ಖಾಲಿ ಇವೆ

ಈ) ಹೌದು

ಶ್ರೀ ವಡ್ಡಳ್ ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ನನ್ನ ಪ್ರಶ್ನೆಗೆ ಉತ್ತರಿಸುತ್ತಾ ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 8 (ಪಿ.ಹೆಚ್.ಯು.) ಪ್ರಾಥಮಿಕ ಆರೋಗ್ಯ ಘಟಕಗಳಿವೆ ಎಂದು ತಿಳಿಸಿದ್ದಾರೆ. ಚನ್ನಗಿರಿ ತಾಲ್ಲೂಕು ಇಡೀ ರಾಜ್ಯದಲ್ಲಿರತಕ್ಕ ದೊಡ್ಡ ತಾಲ್ಲೂಕುಗಳಲ್ಲಿ ಒಂದಾಗಿದೆ. ಸುಮಾರು 130 ಗ್ರಾಮಗಳು ಚನ್ನಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತವೆ. ಇಷ್ಟೊಂದು ದೊಡ್ಡ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳೆರಡೂ ಸೇರಿ ಕೇವಲ 22 ಮಾತ್ರ ಇವೆ. ಉಳಿದಿರತಕ್ಕಂಥ ಗ್ರಾಮಗಳಿಗೆ ಹೆಚ್ಚುವರಿಯಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕಗಳನ್ನು ಮಂಜುರು ಮಾಡುವಂತಹ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದಿದೆಯೇ ಎನ್ನತಕ್ಕಂತಹ ವಿಚಾರವನ್ನು ಮಾನ್ಯ ಆರೋಗ್ಯ ಸಚಿವರು ನನಗೆ ತಿಳಿಸಬೇಕೆಂದು ಬಯಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರದ ಪ್ರತಿಗಳು ಇಲ್ಲ ಯಾವ ಸದಸ್ಯರಿಗೂ ಕೂಡ ಬಂದಿರುವುದಿಲ್ಲ. ನಾನು ಈ ಬಗ್ಗೆ ಸುತ್ತಮುತ್ತ ಇರುವ ಸದಸ್ಯರನ್ನು ವಿಚಾರಿಸಿದ್ದೇನೆ. ಬಹುಶ: ಪ್ರಶ್ನೆಯನ್ನು ಕೇಳಿದಂತಹ ಮಾನ್ಯ ಸದಸ್ಯರೊಬ್ಬರಿಗೆ ಮಾತ್ರ ಉತ್ತರದ ಪ್ರತಿಯನ್ನು ಒದಗಿಸಿದ್ದಾರೆಂದು ಕಾಣುತ್ತದೆ.

ಶ್ರೀ ಎಂ. ಚಂದ್ರಪ್ಪ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಾನ್ಯ ಸದಸ್ಯರೊಬ್ಬರಿಗೆ ಮಾತ್ರ ಉತ್ತರಗಳನ್ನು ಕಳುಹಿಸುವುದಾದರೆ ಈ ಪ್ರಶ್ನೆ ಬಗ್ಗೆ ಇಲ್ಲೇಕೆ ಚರ್ಚೆಯಾಗಬೇಕು?

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಆ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸೀಮಿತವಾಗಿ ಕೇಳಲಾಗಿದೆ. ಆ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಸದಸ್ಯರಿಗೆ ಉತ್ತರದ ಪ್ರತಿ ಒದಗಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸಪ್ಲಿಮೆಂಟರಿಯನ್ನು ಅವರು ಕೇಳಬಹುದಾಗಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಮಂತ್ರಿಗಳು ಈ ರೀತಿ ಹೇಳಿದರೆ ಹೇಗೆ? ಎಲ್ಲಾ ಪ್ರಶ್ನೆಗಳಿಗೂ ಉತ್ತರದ ಪ್ರತಿಗಳನ್ನು ಪಡೆದುಕೊಳ್ಳಲು ಪ್ರತಿಯೊಬ್ಬ ಸದಸ್ಯನಿಗೂ ಹಕ್ಕಿದೆ. ಪ್ರಶ್ನೋತ್ತರಗಳು ಈ ಸದನದ ಆಸ್ತಿ. ಎಲ್ಲಾ ಮಾನ್ಯ ಸದಸ್ಯರುಗಳಿಗೂ ಉತ್ತರದ ಪ್ರತಿಗಳನ್ನು ಒದಗಿಸಬೇಕೆಂಬುದು ಈ ಸದನದ ನಿಯಮಾವಳಿಗಳಲ್ಲೇ ಇದೆ.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ಉತ್ತರಗಳನ್ನು ಎಲ್ಲಾ ಮಾನ್ಯ ಸದಸ್ಯರುಗಳ ಟೇಬಲ್‌ಗಳಿಗೂ ಹಂಚಲಾಗಿದೆ.

(ಗೊಂದಲ)

ಶ್ರೀ ಎಂ.ಚಂದ್ರಪ್ಪ : ಈಗ ಆ ಪ್ರಶ್ನೆಗೆ ಉತ್ತರವನ್ನು ಹಂಚುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋದ ಪಕ್ಷದ ನಾಯಕರು): ಮಾನ್ಯ ಸದಸ್ಯರಾದ ವಡ್ನಾಳ್ ರಾಜಣ್ಣನವರು ಕೇಳಿದ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರದ ಪ್ರತಿಗಳನ್ನು ಎಲ್ಲರಿಗೂ ಸರಬರಾಜು ಮಾಡಿಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾವೇ ಗೋಗೆರೆದು 'ಅಪ್ಪಾ' ಎಂದು ಎನಿಸಿಕೊಳ್ಳಬೇಕಾದಂತಹ ಕಾಲ ಬಂದಿದೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿ ಹೊಸದೊಂದು ಸಂಪ್ರದಾಯವನ್ನು ತರಲಿಕ್ಕೆ ಹೊರಟಿದ್ದಾರೆ....

(ಗೊಂದಲ)

ಅಧ್ಯಕ್ಷರು : 11-15 ಗಂಟೆಗೆ ಎಲ್ಲಾ ಸದಸ್ಯರು ಟೇಬಲ್‌ಗಳಿಗೂ ಕೂಡ ಉತ್ತರಗಳನ್ನು ಹಂಚಲಾಗಿದೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾವು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿರುವುದು ಇದೇ ಮೊದಲನೆಯ ಬಾರಿ ಏನೂ ಅಲ್ಲ. ಹಿಂದೆಯೂ ಸಹಾ ನಾವು ಈ ಬಗ್ಗೆ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಹಿಂದಿನ ದಿವಸವೇ ಉತ್ತರ ಬರುವಂತೆ ಮಾಡಬೇಕು.

ಅಧ್ಯಕ್ಷರು : ಹಿಂದಿನ ದಿವಸವೇ ಉತ್ತರ ನೀಡುವಂತೆ ಹೇಳಿರುತ್ತೇವೆ. ಆದರೆ ಆಕಸ್ಮಾತ್ತಾಗಿ ಕೆಲವರು ಬೆಳಿಗ್ಗೆ ಉತ್ತರಗಳನ್ನು ತಂದು ಕೊಡುತ್ತಾರೆ. ಇದರಿಂದಾಗಿ ಸ್ವಲ್ಪ ಅರ್ಧ ಗಂಟೆ ಅಥವಾ ಒಂದು ಗಂಟೆ ಲೇಟಾಗಬಹುದು. ದಯವಿಟ್ಟು ತಾವು ಸ್ವಲ್ಪ ಸೈರಣೆ ಮಾಡಿಕೊಂಡು ಹೋಗಬೇಕು.

ಶ್ರೀ ಸಿ.ಬೈರೇಗೌಡ : ಕೊನೆಯಪಕ್ಷ ಸದನ ಪ್ರಾರಂಭವಾಗುವಷ್ಟರೊಳಗಾಗಿಯಾದರೂ ಉತ್ತರಗಳನ್ನು ಒದಗಿಸಿರಬೇಕಲ್ಲವೇ?

ಅಧ್ಯಕ್ಷರು : ಸದನ ಪ್ರಾರಂಭವಾದಾಗಲೇ ತಮ್ಮ ತಮ್ಮ ಟೇಬಲ್‌ಗಳ ಮೇಲೆ ಉತ್ತರಗಳನ್ನು ಇಡಲಾಗಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲು ಇಚ್ಛಿಸುವುದೇನೆಂದರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಪ್ರಶ್ನೆ ಕೇಳಿದವರಿಗೆ ಮಾತ್ರ ಉತ್ತರಗಳನ್ನು ಒದಗಿಸಬೇಕು ಎನ್ನತಕ್ಕಂಥ ಮಾತನ್ನು ಆಡಿದ್ದಾರೆ. ಅದು ಸರಿಯಾದುದ್ದಲ್ಲ.

MR. SPEAKER : If it is a question of general nature, ...?

SRI. C. BYREGOWDA : Whatever the matter, irrespective of the nature of the question, once the question is put, it becomes the property of the House and every member is entitled to get a copy of the answer..... This is not correct.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ವೇಮಗಲ್ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನೀವು ಒಂದು ಪ್ರಶ್ನೆಯನ್ನು ಕೇಳಿರುತ್ತೀರಿ ಎಂದಿಟ್ಟುಕೊಳ್ಳೋಣ. ಆ ಪ್ರಶ್ನೆಗೆ ಎಲ್ಲಾ 225 ಜನ ಶಾಸಕರೂ ಕೂಡ ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಬೇಕೆಂದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಎಲ್ಲರಿಗೂ ಉತ್ತರದ ಪ್ರತಿ ಮುಟ್ಟಬೇಕು.

ಅಧ್ಯಕ್ಷರು : ಎಲ್ಲಾ ಸದಸ್ಯರಿಗೂ ಕೂಡ 11- 15 ಗಂಟೆಗೆ ಉತ್ತರದ ಪ್ರತಿ ಮುಟ್ಟಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ, ಸರ್ಕಾರದ ಕೆಲವೊಂದು ಇಲಾಖೆಯವರು ಬಹಳ ಲೇಟಾಗಿ ನಮ್ಮ ಕಾರ್ಯಾಲಯಕ್ಕೆ ಉತ್ತರಗಳನ್ನು ತಂದು ಕೊಡುವುದರಿಂದ ಈ ರೀತಿಯ ಸಮಸ್ಯೆಗಳಾಗುತ್ತಿದೆ. ಇದರಿಂದ ನಾವು ಬಹಳ ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ ಸರ್ಕಾರದ ಕಡೆಯಿಂದ ಉತ್ತರ ಬಂದಿಲ್ಲವೆಂದರೆ ನಾನು ಅದಕ್ಕೆ ಉತ್ತರ ಹೇಳಬಹುದು. ಸದಸ್ಯರುಗಳಿಗೆ ಉತ್ತರ ತಲುಪಿಲ್ಲ ಎನ್ನುವುದಕ್ಕೆ ತಾವೇ ಉತ್ತರ ಹೇಳಬೇಕೇ ಹೊರತು ನಾನು ಅದಕ್ಕೆ ಉತ್ತರ ಹೇಳಬೇಕಾಗಿಲ್ಲ. ಈ ರೀತಿಯ ಸಮಸ್ಯೆಗಳು ಬರುತ್ತವೆಂದೇ ಹಿಂದೆ ಯಾರು ಲಿಮಿಟೆಡ್ ಆಗಿ ಅವರ ಕ್ಷೇತ್ರಕ್ಕೆ ಸೀಮಿತವಾಗಿ ಪ್ರಶ್ನೆ ಕೇಳುತ್ತಿದ್ದರೋ ಅವರಿಗೆ ಮಾತ್ರ ಉತ್ತರಗಳನ್ನು ಕಳುಹಿಸಲಾಗುತ್ತಿತ್ತು. ಈಗ ಎಲ್ಲರಿಗೂ ಹೋಗಬೇಕೆಂದರೆ ....

SRI. C. BYREGOWDA : No, It cannot be. The answer tabled here is the property of this House. Every member is entitled to get the answer copy.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ಯಾವುದನ್ನು ಅಲೋ ಮಾಡಬೇಕು, ಬಿಡಬೇಕು ಎಂಬುದು ಅಧ್ಯಕ್ಷರಿಗೆ ಗೊತ್ತಿದೆ.

(ಗೊಂದಲ)

SRI D.B. CHANDREGOWDA : Our responsibility is to supply the answer so far as the Distribution of the copies are concerned, it is the responsibility of the legislature secretariat..

ಶ್ರೀ ಸಿ.ಬೈರೇಗೌಡ : ಉತ್ತರದ 300 ಪ್ರತಿಗಳನ್ನು ವಿಧಾನಸಭಾ ಕಾರ್ಯಾಲಯಕ್ಕೆ ಕಳುಹಿಸಬೇಕೆಂಬ ಸೂಚನೆ ಸರ್ಕಾರಕ್ಕೆ ಹೋಗಿರುತ್ತದೆ.....

ಅಧ್ಯಕ್ಷರು : ಇಲ್ಲಿ ಯಾವ ಟೈಪ್ ಆಫ್ ಸಪ್ಲಿಮೆಂಟರೀಸ್ ಕೇಳಬೇಕು ಎಂಬ ಬಗ್ಗೆ ನಾನು ಇಲ್ಲಿ ನಿರ್ಧರಿಸಿ ಕಂಟ್ರೋಲ್ ಮಾಡುತ್ತೇನೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಯಾವ ಪ್ರಶ್ನೆಗೆ ಯಾರು ಸಪ್ಲಿಮೆಂಟರಿ ಕೇಳಬೇಕೆಂಬ ಬಗ್ಗೆ ತಾವು ಡಿಸೈಡ್ ಮಾಡುತ್ತೀರಿ ಎಂಬುದು ನಿಜ. ಉದಾಹರಣೆಗೆ ಹೇಳುವುದಾದರೆ, ಬಳ್ಳಾರಿ ಜಿಲ್ಲೆಯಲ್ಲಿ ಯಾವುದೋ ಅನುದಾನಿತ ಶಾಲೆಯಲ್ಲಿರುವ ಅನುಪಾತ ವಿಷಯ ನಮ್ಮೆಲರಿಗೂ ಕೂಡ ಗೊತ್ತಾಗಬೇಕು. ಆ ಪರ್ಟಿಕ್ಯುಲರ್ ಸದಸ್ಯರಿಗೆ ಮಾತ್ರ ಉತ್ತರ ಗೊತ್ತಾದರೆ ಸಾಕು ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಅದರ ಬಗ್ಗೆ ಚರ್ಚೆಯಾಯಿತಲ್ಲಾ? ಅದನ್ನು ಬಿಡಿ. ಮಾನ್ಯ ಸಿಂಧ್ಯಾರವರು ಏನೋ ಮಾತನಾಡಲಿಕ್ಕೆ ನಿಂತಿದ್ದಾರೆ. ದಯವಿಟ್ಟು ಅವರು ಮಾತನಾಡಲಿ

ಶ್ರೀ ಪಿ.ಜಿ ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಇಲ್ಲ ನಾನು ಒಂದೇ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಇತರ ಮಂತ್ರಿಗಳು ಈ ಸದನದಲ್ಲಿದ್ದಾರೆ. ಈ ವಿಧಾನಸಭೆ ರಚಿತವಾಗಿ ಈಗಾಗಲೇ ಆರು ತಿಂಗಳಾಗಿದೆ. ಈ ವಿಧಾನಸಭೆಯಲ್ಲಿ ಇದು ಎರಡನೇ ಬಾರಿಗೆ ಅಧಿವೇಶನ ನಡೆಯುತ್ತಿದೆ. ಇದೇ ಮೊದಲನೇ ಬಾರಿಗೆ ಈ ರೀತಿಯಾಗುತ್ತಿಲ್ಲ. ಸರ್ಕಾರದವರು ನಾವು ನಿನ್ನೆ ರಾತ್ರಿ ಅಥವಾ ಇವತ್ತು ಬೆಳಿಗ್ಗೆಯೇ ಉತ್ತರವನ್ನು ಕೊಟ್ಟಿದ್ದೇವೆ, ಅಧ್ಯಕ್ಷರೆ ಕಾರ್ಯಾಲಯದಿಂದ ಮಾನ್ಯ ಸದಸ್ಯರುಗಳಿಗೆ ಉತ್ತರಗಳನ್ನು ಕಳುಹಿಸತಕ್ಕಂಥ ಕೆಲಸವಾಗಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದೇನೂ ಹೊಸ ವಿಚಾರವಲ್ಲ. ಇಲ್ಲಿ ತೊಂದರೆ ಏನಿದೆ? ಮೊದಲನೆಯದಾಗಿ, ಬಹಳ ಮುಖ್ಯವಾಗಿ ಪ್ರಶ್ನೋತ್ತರಗಳ ಕಾಲದಲ್ಲಿ ಅನೇಕ ಮಂತ್ರಿಗಳು ಹಾಜರಿರದೇ ಇರುವುದನ್ನು ನಾವು ಗಮನಿಸಿದ್ದೇನೆ. ನಿನ್ನೆ ಮತ್ತು ಮೊನ್ನೆ ಬಹಳ ಮಂತ್ರಿಗಳು ಇರಲಿಲ್ಲ. ಪ್ರಶ್ನೋತ್ತರಗಳ ಕಾಲದಲ್ಲಿ ಮಾನ್ಯ ಸದಸ್ಯರುಗಳು ತಮ್ಮ ಪ್ರಶ್ನೆಗಳಿಗೆ ಸ್ಪೆಸಿಫಿಕ್ಕಾದ ಉತ್ತರಗಳನ್ನು ಬಯಸುತ್ತಾರೆ. ರೂಲ್ 69, ಮತ್ತೆ ರಾಜ್ಯಪಾಲರ ಭಾಷಣದ ಬಗ್ಗೆ ಉತ್ತರ ಕೊಡುವಾಗ, ಬಡ್ಜೆಟ್ ಬಗ್ಗೆ ಉತ್ತರ ಕೊಡುವಾಗ ಕ್ಲ್ಯಾರಿಫಿಕೇಷನ್‌ನಲ್ಲಿ ಮಂತ್ರಿಗಳಾದ ನಾವು ಏನು ಮಾಡುತ್ತೇವೆ, ನಮಗೆ ಪ್ರಚಾರ ಬರತಕ್ಕಂಥದ್ದನ್ನು ಮಾತ್ರ ಹೇಳಿ, ಅವರು ಹೇಳತಕ್ಕಂಥದ್ದನ್ನು ಸಾಧಿಸತಕ್ಕಂತಹ ಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ನಮಗೆ ನಾಲ್ಕು ವರ್ಷಗಳಾದ ಮೇಲೆ ನಮ್ಮ ಪಕ್ಷದ ಸರ್ಕಾರಕ್ಕೆ ಏನು ಕಾಯಿಲೆ ಬಂದಿತ್ತು, ಆ ಕಾಯಿಲೆ ಇವರಿಗೆ ನಾಲ್ಕು ತಿಂಗಳಲ್ಲೇ ಬಂದಿದೆ ಎಂದು ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. There is absolutely no coordination. This should not happen. ನಾವು ಅವರಿಗೆ ಏನೂ ಹೇಳುವುದಕ್ಕಾಗುವುದಿಲ್ಲ ಅವರು ಕೇಳುವ ಸ್ಥಿತಿಯಲ್ಲಿಲ್ಲ ಏಕೆಂದರೆ ಅವರಿಗೆ 150 ಜನರ ಮೆಜಾರಿಟಿ ಇರುವುದರಿಂದ ಮಾಡಿಕೊಂಡು ಹೋಗುತ್ತಾರೆ. 15,20 ಪ್ರಶ್ನೆಗಳಿವೆ, ಒಂದು ದಿನ ಮುಂಚಿತವಾಗಿ ಉತ್ತರ ಬಾರದೆ ಹೋದರೆ ಅದನ್ನು ನಾನು ಇಲ್ಲಿ ಕೊಡುವುದಿಲ್ಲವೆಂದು ಹೇಳಿ ಬಿಡಿ. ಆಗ ಅವರು ಕೊಡಲೇಬೇಕಾಗುತ್ತದೆ. ನಾವು ಪ್ರಶ್ನೆಗಳನ್ನು ಏಕೆ ಕೇಳುತ್ತೇವೆ? ಲೋಯರ್ ಲೆವಲ್‌ನಲ್ಲಿ ಒಬ್ಬ ಆಫೀಸರ್ ಇರುತ್ತಾರೆ, ಅವರು ಆಕ್ಟೀವ್ ಆಗಬೇಕು. ಅವರು ಆಕ್ಟೀವ್

ಆಗಬೇಕೆಂದು ಹೇಳಿದಾಗ, ಮಂತ್ರಿಗಳಾದವರು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಜಿಲ್ಲಾಧಿಕಾರಿಗಳನ್ನು ಕರೆಸಿ ಸರಿಯಾದ ಉತ್ತರವನ್ನು ತರಿಸಬೇಕು. ತಾವು ಹಿರಿಯ ಸಂಸದೀಯ ಪಟುಗಳು, ಅದೆಲ್ಲ ತಮಗೆ ಗೊತ್ತಿದೆ. 1970ರಿಂದಲೂ ಸಹ ಮೇಲ್ಮನೆಯಲ್ಲಿ ಹಾಗೂ ಕೆಳಮನೆಯಲ್ಲಿ ಸದಸ್ಯರಾಗಿ ಇರತಕ್ಕಂಥವರು ತಾವು, ತಮಗೆ ಎಲ್ಲಾ ಗೊತ್ತಿದೆ. ಈ ಸದನವನ್ನು ಡಿಸಿ ಎಸ್. ಪಿ ಕಡೆಯಿಂದ ಇನ್ ಫರ್ಮೇಷನ್ ಬರುವವಗಿಂತ ನಡೇದೆ ನಿಲ್ಲಿಸಿರತಕ್ಕಂತಹ ಉದಾಹರಣೆಗಳಿವೆ. ಪ್ರಶ್ನೋತ್ತರ ನಮ್ಮ ಹಕ್ಕು. ತಮ್ಮಲ್ಲಿ ನನ್ನ ಮನವಿ ಏನೆಂದರೆ, 24 ಗಂಟೆಯೊಳಗೆ ನಿಮ್ಮ ಕಛೇರಿಗೆ ಉತ್ತರ ಬಾರದೆ ಹೋದರೆ ಅದನ್ನು ಹಿಡಿದಿಡುತ್ತೇವೆಂದು ಹೇಳಿ. ಆಗ ಆದಕ್ಕೆ ಸರಿಯಾದ ಉತ್ತರ ಸಿಗುತ್ತದೆ. ಇದು ನಮ್ಮ ಸಲಹೆ.

ಅಧ್ಯಕ್ಷರು : ಈಗಾಗಲೇ ನಾನು ಅದನ್ನು ಮಾಡಿದ್ದೇನೆ. ನಾಳೆಗೆ ಉತ್ತರ ಕೊಡುವಂತಹ ಪ್ರಶ್ನೆಗೆ ಇವತ್ತು ಸಂಜೆ ಏಳು ಗಂಟೆಯವರೆಗೆ ಕೊಡಬೇಕೆಂದು ಹೇಳಿದ್ದೇನೆ. ಇಲ್ಲಿ ಏನಾಗುತ್ತದೆ ಎಂದರೆ ಒಂದೊಂದು ಸಾರಿ 10 ಪ್ರಶ್ನೆಗಳಿಗೆ ಉತ್ತರ ಬಂದಿದೆ; ಆ 10ರಲ್ಲಿ ಏಳಕ್ಕೆ ಮೊದಲು ಬಂದಿತ್ತು, ನಂತರ ಮೂರಕ್ಕೆ ಬಂದಿದೆ. ಪ್ರಶ್ನೆಗಳಿಗೆ ಉತ್ತರ ಬರಲಿಲ್ಲವೆಂದರೆ ನೀವು ಗಲಾಟೆ ಮಾಡುತ್ತೀರಿ; ಅದಕ್ಕೋಸ್ಕರ ನಾನು ಅವಕಾಶ ಮಾಡಿ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಗಲಾಟೆ ಮಾಡುವುದಿಲ್ಲ. Please hold over those questions.

ನೀವು ಒಂದು ಸ್ಟೇಟ್‌ಮೆಂಟ್ ಮಾಡಿಕೊಂಡು ಅಧಿವೇಶನ ಮುಗಿದ ಮೇಲೆ ಎಷ್ಟು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಹಾಕಿದ್ದರು, ಸರ್ಕಾರದವರು ಎಷ್ಟಕ್ಕೆ ಉತ್ತರ ಕೊಟ್ಟಿದ್ದಾರೆ, ಉಳಿದವಕ್ಕೆ ಉತ್ತರ ಕೊಟ್ಟಿಲ್ಲವೆಂದು ಹೇಳಿ ಬಿಡಿ. ಆಗ ಅವರಿಗೆ ಗೊತ್ತಾಗುತ್ತದೆ. They have to be held responsible for that.

ಶ್ರೀ ಡಿ.ಬಿ.ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾವು ನೇರವಾಗಿ ಮಾನ್ಯ ಸದಸ್ಯರಿಗೆ ಉತ್ತರ ಕಳುಹಿಸುವುದಕ್ಕಾಗುವುದಿಲ್ಲ. ನಾವು ಏನು ಕಳುಹಿಸಿದರೂ ತಮ್ಮ ಮೂಲಕ ಕಳುಹಿಸುವುದು ಸರ್ಕಾರದ ಜವಾಬ್ದಾರಿ ಉತ್ತರ ಕಳುಹಿಸುವುದು ಹೊರತು ಉತ್ತರವನ್ನು ಸದಸ್ಯರಿಗೆಲ್ಲರಿಗೂ ಕಳುಹಿಸುವುದಕ್ಕಾಗುವುದಿಲ್ಲ. ಅದು ತಮ್ಮ ಹಕ್ಕು. ಕೆಲವು ವಿಚಾರಗಳಲ್ಲಿ ನಾವು ಎಲ್ಲವನ್ನೂ ರೂಲ್ಸ್ ಪುಸ್ತಕದ ಪ್ರಕಾರ ಮಾಡುವುದಕ್ಕಾಗುತ್ತಿಲ್ಲ. ಒಂದು ಗಂಟೆಯಲ್ಲಿ ಪ್ರಶ್ನೋತ್ತರ ವೇಳೆ ಮುಗಿಸಬೇಕು ಎಂದು ಇದ್ದರೂ ಅದು ಆಗುತ್ತಿಲ್ಲ. ಯಾರ್ಯಾರು ಸಪ್ಲಿಮೆಂಟರಿ ಕೇಳುತ್ತಾರೆ ಅದೂ ಆಗುವುದಿಲ್ಲ. ಉತ್ತರ ಮಾತ್ರ ಪದೇ ಪದೇ ಕೇಳುತ್ತಾರೆ. ಅದಕ್ಕೂ ಸುಮಾರು 30 ದಿವಸಗಳ ಸಮಯ ಸರ್ಕಾರಕ್ಕೆ ಬೇಕು. ಆದ್ದರಿಂದ ನಾನು ಆ ತಾಂತ್ರಿಕ ವಿಚಾರಗಳಿಗೆ ಹೋಗುವುದಿಲ್ಲ. ಈಗ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿದೆ, ಎಲ್ಲಾ ಸದಸ್ಯರಿಗೆ ಅದು ಡಿಸ್ಟ್ರಿಬ್ಯೂಟ್ ಆಗಿದೆ.

SRI. P.G.R. SCINDIA : Again it is a reflection against the Chair - What he is attributing!

ಡಾ|| ಎ.ಬಿ. ಮಾಲಕರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಡ್ಡಾಳ್ ರಾಜಣ್ಣನವರು ನನ್ನದು ಬಹಳ ದೊಡ್ಡ ತಾಲ್ಲೂಕಿದೆ, ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೇಕೆಂದು ಕೇಳುತ್ತಿದ್ದಾರೆ. ಉತ್ತರ ಆವರ ಮುಂದೆ ಇದ್ದಂತೆ ಅಲ್ಲಿ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಎಂಟು ಪ್ರಾಥಮಿಕ ಆರೋಗ್ಯ ಘಟಕಗಳಿವೆ. ಸುಮಾರು 22 ಆರೋಗ್ಯ ಸಂಸ್ಥೆಗಳು ಅವರ ಆರೋಗ್ಯ ಕ್ಷೇತ್ರದಲ್ಲಿ ಇವೆ. ಅವರು ಹೊಸದಾಗಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ, ಉತ್ತಮವಾಗಿ ಕೆಲಸ ಮಾಡಬೇಕೆಂದು ಹುರುಪಿದೆ; ಆದರೆ ನಿಯಮದ ಪ್ರಕಾರ, ಅನುಪಾತದ ಪ್ರಕಾರ 30,000 ಜನ ಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂದು ಇರುತ್ತದೆ. ಅದರಲ್ಲಿ ಸರ್ಪ್ಲಸ್ ಕೂಡ ಇದ್ದೆ ಹಾಗೆ ನಾವು ನಿಯಮದ ಪ್ರಕಾರ ಹೋಗಬೇಕಾದರೆ ನಿಮ್ಮಲ್ಲಿರತಕ್ಕಂತಹ ಆರೋಗ್ಯ ಸಂಸ್ಥೆಗಳನ್ನು ಕಿತ್ತು ಬೇರೆ ಮತ ಕ್ಷೇತ್ರಕ್ಕೆ ಕೊಡಬೇಕಾಗುತ್ತದೆ.

ಶ್ರೀ ವಡ್ಡಾಳ್ ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೆ, ಇನ್ನೊಂದು ನನ್ನ ಮುಖ್ಯವಾದ ಪ್ರಶ್ನೆ ಏನೆಂದರೆ ಚನ್ನಗಿರಿಯ ಸಾರ್ವಜನಿಕ ಆಸ್ಪತ್ರೆಗೆ ಪ್ರಸಕ್ತ ವರ್ಷದಲ್ಲಿ ಮಹಿಳಾ ವೈದ್ಯರನ್ನು ನೇಮಿಸಲಾಗುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಮಾನ್ಯ ಮಂತ್ರಿಗಳು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ ಅವರು ಬಹಳ ಅನುಭವ ಇರತಕ್ಕಂಥವರು ಹಾಗೂ ಹಿರಿಯರು. ಅವರು ಕೊಟ್ಟಿರುವ ಈ ಉತ್ತರ ಹೇಗಿದೆಯೆಂದರೆ ನಾಳೆ ಆಗುತ್ತದೆ, ಆರು ತಿಂಗಳಿಗೆ ಆಗುತ್ತದೆ, ವರ್ಷಕ್ಕೆ ಆಗುತ್ತದೆ, ಐದು ವರ್ಷಕ್ಕೆ ಆಗುತ್ತದೆ ಗೊತ್ತಿಲ್ಲ ಎನ್ನುವ ರೀತಿಯಲ್ಲಿ ಈ ಉತ್ತರ ಇದೆ. ಇದು ಚನ್ನಗಿರಿ ಜನತೆಯ ದೌರ್ಭಾಗ್ಯ ಎಂದು ಹೇಳಬೇಕಾಗುತ್ತದೆ. ಆ ತಾಲ್ಲೂಕಿನವರೇ ಹಿಂದೆ ಕಾರ್ಯ ಮುಖ್ಯ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಸಹ ಮಹಿಳಾ ವೈದ್ಯರನ್ನು ಅಲ್ಲಿಗೆ ಹಾಕತಕ್ಕಂತಹ ಪ್ರಯತ್ನ ನಡೆಯಲಿಲ್ಲ. ಆದರೆ ಇವತ್ತು ನನ್ನ ಪ್ರಾರ್ಥನೆ ಇದೆ, ಶತಾಯಗತಾಯ ಮಹಿಳಾ ವೈದ್ಯರನ್ನು ತಕ್ಷಣ ಅಲ್ಲಿಗೆ ನೇಮಕ ಮಾಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಡಾ|| ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಸದನದಲ್ಲಿ ನಾನು ಹೇಳಿದಂತೆ 574 ಡಾಕ್ಟರ್‌ಗಳನ್ನು ಆಯ್ಕೆ ಮಾಡಲಾಗಿದೆ. ಆದರೆ ಇನ್ನೂ ನೇಮಕಾತಿ ಮಾಡಿ. ಏಕೆಂದರೆ ಅದೆಲ್ಲ ಸರ್ಟಿಫಿಕೇಟ್ ಆಫ್ ವೆರಿಫಿಕೇಷನ್‌ಗೆ ಹೋಗಿದೆ. ಆ ಸರ್ಟಿಫಿಕೇಟ್ ಆಫ್ ವೆರಿಫಿಕೇಷನ್ ಆಗಿ ಬಂದಮೇಲೆ ಎಲ್ಲೆಲ್ಲಿ ಜಾಗ್ದೆಗಳು ಖಾಲಿ ಇದೆ, ಅಂತಹ ಪ್ರದೇಶಗಳಿಗೆ ಈ ವೈದ್ಯರನ್ನು ಪೋಸ್ಟ್ ಮಾಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ ಈ ಉತ್ತರವನ್ನು ನಾನು ಒಂದು ವರ್ಷದಿಂದ ಕೇಳುತ್ತಿದ್ದೇನೆ. ಈ ಪ್ರಕ್ರಿಯೆ ಯಾವತ್ತು ಮುಗಿಯುತ್ತದೆ ಎಂದು ಅವರು ಕೇಳಬೇಕಾಗುತ್ತದೆ. ಆ ಸರ್ಕಾರ ಈ ಸರ್ಕಾರ ಅಂತ ಅಲ್ಲ, ಈ ಉತ್ತರವನ್ನು ಕಳೆದ ಒಂದು ವರ್ಷದಿಂದ ನಾವು ಕೇಳುತ್ತಿದ್ದೇವೆ; ಆಗಿನಿಂದಲೂ ಕೂಡ 583 ಜನ ಡಾಕ್ಟರುಗಳು ಆಯ್ಕೆಯಾಗಿದ್ದಾರೆ, ಸರ್ಟಿಫಿಕೇಟ್ ಆಫ್ ವೆರಿಫಿಕೇಷನ್‌ಗೆ ಕಳುಹಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಪ್ರಕ್ರಿಯೆಯನ್ನು ಯಾವತ್ತು ಮುಗಿಸಿ ಅಲ್ಲಿಗೆ ಪೋಸ್ಟಿಂಗ್ಸ್ ಕೊಡುತ್ತಾರೆಂದು ನಾನು ಸರ್ಕಾರಕ್ಕೆ ಕೇಳುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವು ಸಾಕಷ್ಟು ರಿಮೈಂಡರ್ಸ್ ಕಳುಹಿಸಿದ್ದೇವೆ. ಒಂದು ವಾರದಿಂದ ನಾವು ಅದರಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಒಂದು ವಾರದ ನಂತರ ಈ ನೇಮಕಾತಿ ಪ್ರಾರಂಭವಾಗಿ ಖಾಲಿ ಸ್ಥಳಗಳಲ್ಲಿ ಈ ವೈದ್ಯರನ್ನು ನೇಮಕ ಮಾಡುತ್ತೇವೆ.

ಶ್ರೀ ವಡ್ನಾಳ್ ರಾಜಣ್ಣ : ಮಾನ್ಯ ಅಧ್ಯಕ್ಷರೇ, ಆರು ತಿಂಗಳಾದರೂ ಪರವಾಗಿಲ್ಲ ಚನ್ನಗಿರಿ ಕ್ಷೇತ್ರಕ್ಕೆ ಮಹಿಳಾ ವೈದ್ಯರನ್ನು ಕೊಡುತ್ತೇವೆನ್ನುವ ಭರವಸೆಯನ್ನು ಅವರು ಕೊಡಬೇಕೆಂದು ತಮ್ಮ ಮೂಲಕ ನಾನು ಹೇಳುತ್ತೇವೆ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ಮಹಿಳಾ ವೈದ್ಯರುಗಳ ನೇಮಕಾತಿ ವಿಚಾರ ನಮಗೆ ದೊಡ್ಡ ಸಮಸ್ಯೆಯಾಗಿದೆ. ನಮ್ಮ ಮಿತ್ರರಾದ ಮಾನ್ಯ ಅರಗ ಜ್ಞಾನೇಂದ್ರರವರು ಬಂದಿಲ್ಲ. ಅವರು ಒಂದು ಪ್ರಶ್ನೆ ಕೇಳಿದ್ದರು. ಅವರ ಕ್ಷೇತ್ರದಲ್ಲಿಯೂ ಕೂಡ ಮಹಿಳಾ ವೈದ್ಯಾಧಿಕಾರಿಗಳಿಲ್ಲ. ಏಳು ಜನರಿಗೆ ಪೋಸ್ಟ್ ಮಾಡಿದರೂ ಕೂಡ ಯಾರೂ ಅಲ್ಲಿ ರಿಪೋರ್ಟ್ ಮಾಡಿಕೊಂಡು ಕೆಲಸ ಮಾಡುವುದಕ್ಕೆ ತಯಾರಿಲ್ಲ. ಆದರೂ ನಾನು ಪ್ರಯತ್ನ ಮಾಡುತ್ತೇನೆ. ಈಗ ಹೊಸದಾಗಿ ಆಯ್ಕೆಯಾದ ವೈದ್ಯರಲ್ಲಿ ಯಾರಾದರೂ ಇದ್ದರೆ ಅವರನ್ನು ಖಂಡಿತವಾಗಿ ಚನ್ನಗಿರಿ ತಾಲ್ಲೂಕಿನ ಆಸ್ಪತ್ರೆಗೆ ನಾನು ನೇಮಕ ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಹಿಂದೆ ಒಬ್ಬರು ನಾಗಪ್ಪ ಹಳೂರು ಆರೋಗ್ಯ ಸಚಿವರಿದ್ದರು. ಇದೇ ತರಹದ ಪ್ರಶ್ನೆ ಒಂದೆರಡು ಸಾರಿ ಬಂದಾಗ ಅವರು ಒಂದೇ ಮಾತನ್ನು ಹೇಳಿದರು. ಸತ್ಯಕ್ಕೆ ವೈದ್ಯರ ಕೊರತೆ ಇರುವುದರಿಂದ ಒಬ್ಬ ನರ್ಸ್ ಕೊಟ್ಟರೆ ಸಾಕು ಎಂದು ಹೇಳಿದ್ದರು.

ಶ್ರೀ ವಡ್ನಾಳ್ ರಾಜಣ್ಣ : ಚನ್ನಗಿರಿ ಆಸ್ಪತ್ರೆಯಲ್ಲಿರತಕ್ಕಂತಹ ವೈದ್ಯರ ಪರಿಸ್ಥಿತಿ ಹೇಗಿದೆ ಎಂದರೆ, ಅಲ್ಲಿ ಅವರಿಗೆ ಸಾಕಾಗುವಷ್ಟು ವಸತಿ ಇಲ್ಲದೆ ಇರಬಹುದು, ಇರತಕ್ಕಂತಹ ವಸತಿಯೊಳಗೆ ಇದ್ದುಕೊಂಡು ಅವರು ಕರ್ತವ್ಯವನ್ನು ನಿರ್ವಹಿಸಬೇಕು. ಏಕೆಂದರೆ, ಯಾರೇ ಒಬ್ಬ ಡಾಕ್ಟರ್ ರಾತ್ರಿ ಹೊತ್ತು ರೋಗಿ ಬಳಿ ಹೋದಂತಹ ಸಂದರ್ಭದಲ್ಲಿ ಅವರಿಗೆ ಚಿಕಿತ್ಸೆ ಕೊಡುವ ವ್ಯವಸ್ಥೆ ಇಲ್ಲ. ಕೇಂದ್ರ ಸ್ಥಾನದಲ್ಲಿ ಯಾರೂ ಡಾಕ್ಟರ್‌ಗಳು ಇಲ್ಲದೆ ಅವರವರ ಮನೆಗಳಿಗೆ ಹೋಗತಕ್ಕಂತಹ ಕೆಲಸವಾಗಿದೆ. ಜೊತೆಗೆ ಸಮಯಕ್ಕೆ ಸರಿಯಾಗಿ ಯಾರು ಡಾಕ್ಟಾರ್ ಬರುವುದಿಲ್ಲ. ಆಸ್ಪತ್ರೆಯಲ್ಲಿ ನಿಗಧಿತ ಕೆಲಸದವೇಳೆ 9 ಗಂಟೆ ಎಂದು ಇದ್ದರೆ ಅವರು 11 ಗಂಟೆಗೆ ಬರುತ್ತಾರೆ. ಒಂದು ಗಂಟೆ, ಎರಡು ಗಂಟೆ ರೋಗಿಗಳನ್ನು ನೋಡುತ್ತಾರೆ, ಸರಿಯಾದ ರೀತಿಯಲ್ಲಿ ಔಷಧಿಗಳನ್ನು ಕೊಡುವುದಿಲ್ಲ. ಈ ನಿಟ್ಟಿನಲ್ಲಿ ಸಮರ್ಪಕವಾದ ಶಿಸ್ತಿನ ಕ್ರಮವನ್ನು ಅವರ ಮೇಲೆ ಜರುಗಿಸಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಉಚ್ಚಗಾಂವ್‌ನಲ್ಲಿ ಹೆಚ್ಚುವರಿ ಹಾಲಿ ಕಟ್ಟಡಗಳು ಮತ್ತು ಸಹಾಯಧನ ಬಿಡುಗಡೆ

190 (1775) ಶ್ರೀ ಮನೋಹರ್ ಪುನ್ನಪ್ಪ ಕಾಡೊಳ್ಕರ್ (ಉಚ್ಚಗಾಂವ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಚ್ಚಗಾಂವ್ ವಿಧಾನಸಭಾ ಮತಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಿಂದ ಶಾಲೆಗಳಿಗೆ ಅನುದಾನ ಮತ್ತು ಸಹಾಯಧನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?